ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ೧೨-೧೨-೧೯೮೬ ರಿಂದ ನೋಟೀಸ್ ಜಾರಿಯಾಗುತ್ತಾ ಬಂದಿದೆ ೨೫-೧-೧೯೮೭ರಲ್ಲಿ ಲಿಖಿತ ಮೂಲಕ ಇದು ನಮಗೆ ಸೇರಿದ್ದುದು ನಮ್ಮ ಸ್ವಾಧೀನದಲ್ಲಿದೆ ಎಂದು ಕಾರ್ಪೊರೇಷನ್ನಿಗೆ ಅರ್ಜಿ ಬಂದಿಲ್ಲ. ನಾವೇನು ಮಾಡುವುದು ? ಕಾರ್ಪೊರೇಷನ್ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ನನಗೆ ಅವರು ಮಾಡಿರುವುದರಲ್ಲಿ ಕಾನೂನಿಗೆ ವಿರುದ್ಧವಾಗಿ ಯೋಗಿಲ್ಲ ಎಂದು ವೀಲ್ಲೋಟಕ್ಕೆ ಗೊತ್ತಾಗುತ್ತದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—೯-೧೧-೧೯೮೭ ರಂದು ನಕ್ಷೆ ಜೊತೆಯಲ್ಲಿ ಇವರು ಅರ್ಜಿ ಕಳುಹಿಸಿದ್ದಾರೆ. ೧೩-೧೧-೧೯೮೭ ರಲ್ಲಿ ಅದು ಸರಿಯಿಲ್ಲ, ಇದು ಸರಿಯಿಲ್ಲ ಬೇರೆ ದಾಖಲಾತಿ ಕೊಡಿ ಎಂದು ವಾಪಸ್ ಕಳುಹಿಸಿದ್ದಾರೆ. ಇವರು ಕೊಡುವವರೆಗೆ ಅವರು ಸುಮ್ಮನಿರಬೇಕಾಗಿತ್ತೋ ಇಲ್ಲವೊ? ೧೩-೧-೧೯೮೭ಕ್ಕೆ ವಾಪಸ್ ಕಳುಹಿಸಿ ನಾಲ್ಕನೇ ತಾರೀಖು ಓಡಿಹೋಗಿ ಒಡೆದಿದ್ದು ಏತಕ್ಕೆ? ಆಲ್ಲಿರುವ ಮೆಷಿನರಿ ಒಡೆದುಹಾಕಿದ್ದಾರೆ. ಆದರ ಬಗ್ಗೆ ಫೋಟೊ ಕಳುಹಿಸಿದ್ದೇನೆ. ಇಂಥ ಕೆಲಸ ಮಾಡುತ್ತಾರೆ. ಇದನ್ನೇನಂ ಅಡ್ಮಿನಿಸ್ಟ್ರೇಷನ್ ಎಂದು ಹೇಳುತ್ತೀರಾ? ಇಷ್ಟ ಬಂದಹಾಗೆ ಪೋಲೀಸರನ್ನು ಕರೆದುಕೊಂಡು ಒಡೆದುಹಾಕುವುದು, ಇದೆಂಥ ಉದ್ಯೋಗ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಅವರಿಗೆ ಸಾಕಷ್ಟು ಸೂಚನೆ ಕೊಟ್ಟ ಕಾರ್ಪೊರೇಷನ್ ಆಕ್ಟ್ ಪ್ರಕಾರ ಆ ಸಂಸ್ಥೆಯ ಮಾಲೀಕರಿಗೆ ನೋಟೀಸ್ ಕೊಟ್ಟಿದ್ದಾರೆ. ಅವರ ಪರವಾಗಿ ಕಾನೂನು ಪ್ರಕಾರ ನೇಮಕವಾಗಿರತಕ್ಕ ಪವರ್ ಆಫ್ ಅಟಾರ್ನಿ ಹೋಲ್ಡರ್‌ಗೆ ಕೊಟ್ಟಿದ್ದಾರೆ. ಕಾನೂನು ಪ್ರಕಾರ ಅದಕ್ಕಿಂತ ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ. ಡಿಸೆಂಬರ್ ೧೨ನೇ ತಾರೀಖು ಇದು ಪ್ರಾರಂಭವಾಗಿದ್ದುದು. ಒಡೆದುಹಾಕಿದ್ದು ೪-೨-೧೯೮೭ರಲ್ಲಿ. ಡಿಸೆಂಬರ್ ೧೨ನೇ ತಾರೀಖಿನಿಂದ ೪-೨-೧೯೮೭ರವರೆಗೂ ತಮ್ಮ ಅಭಿಪ್ರಾಯವನ್ನು ಕಾರ್ಪೊರೇಷನ್ನಿಗೆ ಲಿಖಿತ ಮೂಲಕ ತಿಳಿಸಿ ಅಧಿಕೃತವಾಗಿ ಇಲ್ಲಿದ್ದೇವೆ, ಕಟ್ಟಿರುವ ಕಟ್ಟಡ ಅನಧಿಕೃತ ಅಲ್ಲ ಎಂದು ಹೇಳಬಹುದಾಗಿತ್ತು. ಹೇಳುವುದಕ್ಕೆ ಅವಕಾಶ ಇತ್ತು. ನಮಗೆ ಬಂದಿರುವ ಮಾಹಿತಿ ಪ್ರಕಾರ ನಾನು ಉತ್ತರ ಕೊಡುತ್ತಿದ್ದೇನೆ. ಬೇರೆ ಮಾಹಿತಿ ಇದ್ದರೆ ತಾವು ಕಳುಹಿಸಿಕೊಡಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾತನಾಡಿದರೆ ಪ್ರೆಸ್ ಫ್ರೀಡಮ್ ಎಂದು ಹೇಳುತ್ತಾರೆ. ಪ್ರೆಸ್ ನಡೆಸುತ್ತಿರುವವರಿಗೆ ಈ ರೀತಿ ಮಾಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಪ್ರೆಸ್ ಫ್ರೀಡಂಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಕಾರ್ಪೊರೇಷನ್ನಿನವರಿಗೆ ಮಾಹಿತಿ ಕೊಟ್ಟಿದ್ದಾರೆ.

ಅಧ್ಯಕ್ಷರು.—ಮುಂದಿನ ಕಾಲಿಂಗ್ ಅಟೆನ್‌ಷನ್ ಶ್ರೀ ಹಿಂಡಸಗೇರಿ ಅವರದು.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ನಾಳೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಆಗಬಹುದು, ಶ್ರೀ ಕೋಳಿವಾಡ ಅವರು ಗೈರುಹಾಜರಿಯಾಗಿದ್ದಾರೆ.

(2) *Reg : Delay in implementation of the Cauvery Water Suppjy Scheme–III Stage.*

SRI M RAGHUPATHY.—I call the attention of the Hon'ble Urban Development Minister regarding the delay in the implementation of the Cauvery Water Supply Scheme, III Stage.

SRI A. LAKSHMISAGAR (Minister for Urban Development).—Mr. Speaker Sir, I beg to make the following statement.

The Cauvery Water Supply Scheme Stage III with an estimated cost of Rs. 240 crores has been taken up during 1985–86 to bring an additional 270 Million Litres of water per day by 1990.

The priority works amounting to Rs. 15 crores have already been taken up from the assistance received from the State Government and are in progress.

The Life Insurance Corporation of India has given its consent to extend Rs. 50 crores loan at 14% rate of interest per annum.

The Bangalore City Corporation has also agreed to give its share of Rs 30 crores (interest free loan). The project has been posed to the World Bank on 8-12-1986 by the Central Government.

Major items of the project could not be taken up as the project required clearance from the World Bank. After reviewing the position, it was found that the clearance from the World Bank would cause further delay of about two years. Hence to avoid this delay, the Government have since taken a decision to accord approval to take up the scheme without World Bank's assistance and by mobilising necessary funds internally.

The original and revised funding patterns of Cauvery Water Supply Scheme Stage III are as follows.

Original Pattern.			Revised Pattern.		
(Rs. in crores)			(Rs. in crores)		
1. State Govt.	...	Rs. 80	1. State Govt. (loan)	...	Rs. 80
2. L I.C.	...	Rs. 50	2. L.I.C. (loan)	...	Rs. 60
3. B.C.C.	...	Rs. 30	3. B.C.C. (interest free loan)	...	Rs. 30
4. World Bank	...	Rs. 80	4. B.D.A. (grant)	...	Rs. 30
			5. Loan from Defence Establishments and from major industries in Bangalore City.	...	Rs. 40
Total.		Rs. 240/-	Total.		Rs. 240

With the above arrangements, it will be possible to implement the scheme as scheduled and get the water by 1990.

† ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ನಾಗರೀಕರಿಗೆ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಕಾವೇರಿ ಮೂರನೇ ಹಂತದ ಯೋಜನೆಯನ್ನು ಪ್ರಾರಂಭ ಮಾಡಬೇಕೆಂಬ ಉದ್ದೇಶದಿಂದ ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಮಂಜೂರಾತಿಯನ್ನು ಕೊಟ್ಟಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಟೆಂಡರ್ ಕರೆಯದೇ ಇದನ್ನು ವಿಳಂಬ ಮಾಡುತ್ತಿದ್ದಾರೆ. ಟೆಂಡರನ್ನು ಕರೆಯಬೇಕಾದರೆ ಯಾವಾಗಲೂ ೨-೩ ತಿಂಗಳು ಡಿಲೆ ಮಾಡುತ್ತಾರೆ.

ಇದರಿಂದಾಗಿ ರೇಟಿನಲ್ಲಿ ಎಸ್ಕಲೇಸನ್ನಾಗುತ್ತದೆ. ಮತ್ತೆ ಇನ್‌ಫ್ಲೇಷನ್ ಕೂಡ ಆಗುತ್ತದೆ. ೧೯೬೦ರ ವೇಳೆಗೆ ನೀರನ್ನು ಕೊಡುತ್ತೇವೆಂದು ಹೇಳುತ್ತಾರೆ. ೧೯೬೦ರ ವೇಳೆಗೆ ನೀರನ್ನು ಕೊಡುವುದಕ್ಕಾಗುತ್ತದೆಯೇ? ಇದರಿಂದಾಗಿ ಟಾಪ್ ಪ್ರಯಾರಿಟಿಯನ್ನು ಕೊಟ್ಟು ಈ ಯೋಜನೆಯನ್ನು ತೆಗೆದುಕೊಳ್ಳಬೇಕು. ಬೆಂಗಳೂರು ನಗರದಲ್ಲಿ ಮಾರ್ಚ್ ತಿಂಗಳು ಮುಗಿದು ಏಪ್ರಿಲ್-ಮೇ ತಿಂಗಳು ಬಂದರೆ ಮಲ್ಲೇಶ್ವರಂ ಹಾಗೂ ರಾಜಾಜಿನಗರ ಬಡಾವಣೆಗಳಿಗೆ ಕುಡಿಯುವ ನೀರೇ ಸಿಕ್ಕುವುದಿಲ್ಲ. ಎಲ್ಲಾ ಶಾಸಕರು ಬೆಂಗಳೂರು ನಗರದಲ್ಲೇ ನಿವೇಶನ ಬೇಕು ಎಂದು ಹೇಳುತ್ತಾರೆ. ಆದಕ್ಕಾಗಿ ನೀರಿನ ಸೌಕರ್ಯಕ್ಕೋಸ್ಕರ ಸರ್ಕಾರದಿಂದ ಹಣವನ್ನು ಕೊಡಿಸಿ ಎಂದರೆ ಯಾರೂ ಕೊಡಿಸುವುದಕ್ಕೆ ಮುಂದೆ ಬರುತ್ತಿಲ್ಲ. ನೀವೆ ಏನಾದರೂ ಮಾಡಿಕೊಳ್ಳಿ ರಿಸೋರ್ಸಸ್‌ನ್ನು ಮೊಬಿಲೈಸ್ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಆದ್ದರಿಂದ ಇದನ್ನು ಯಾವ ಕಾರಣದಿಂದಲೂ ಡಿಲೇ ಮಾಡಕೂಡದು. ಆ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಖಚಿತ ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಶ್ರೀಮಾನ್ ರಘುಪತಿಯವರು ಹೇಳಿದ ವಿಚಾರಗಳನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಆದಷ್ಟು ಬೇಗ ಈಗಾಗಲೇ ಏನು ಅಂದಾಜು ಇದೆ ಅದರ ಪ್ರಕಾರ ೧೯೬೦ರ ಹೊತ್ತಿಗೆ ೩೨ನೇ ಹಂತದ ಕಾವೇರಿ ನೀರನ್ನು ಬೆಂಗಳೂರು ನಗರಕ್ಕೆ ತರಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ ಆ ಉದ್ದೇಶ ಸಫಲವಾಗುವುದಕ್ಕೋಸ್ಕರ ಏನೇನು ಕೆಲಸ ಮಾಡಬೇಕೋ ಅವುಗಳನ್ನು ಯಾವ ಒಂದು ವಿಳಂಬ ಇಲ್ಲದೆ ಮಾಡುತ್ತೇನೆ. ಯಾವ ತೊಂದರೆಗೂ ಒಳಗಾಗದೆ ಬೆಂಗಳೂರು ನಗರಕ್ಕೆ ನೀರನ್ನು ತರತಕ್ಕ ವಿಚಾರದಲ್ಲಿ ಪ್ರಯತ್ನ ಮಾಡುತ್ತೇನೆ.

ಈ ವರ್ಷದ ಏಪ್ರಿಲ್, ಮೇ ಹಾಗೂ ಜೂನ್‌ನಲ್ಲಿ ಹೋದವರ್ಷದ ರೀತಿಯಲ್ಲಿ ತೊಂದರೆ ಆಗುವುದಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಹಣದ ಬಗ್ಗೆ ಮಾನ್ಯ ರಘುಪತಿಯವರು ಹೇಳಿದ್ದರು. ನಿಜ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ನಮ್ಮ...

ಅಧ್ಯಕ್ಷರು.—ನೀವು ಪ್ರಶ್ನೆ ಕೇಳುವುದಕ್ಕೆ ಬರುವುದಿಲ್ಲ. ನೋಟೀಸ್ ಕೊಟ್ಟವರಿಗಷ್ಟೇ ಅಧಿಕಾರ ಇರುತ್ತದೆ.

ಶ್ರೀ ಎಂ. ಎಸ್, ಕೃಷ್ಣನ್.—ನಮ್ಮ ಏರಿಯಾಕ್ಕೆ ಬಂದು ನೋಡಿ, ನಿಮಗೆ ಆಗ ಗೊತ್ತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಪ್ರಪಂಚ ಬ್ಯಾಂಕಿನಿಂದ ಬರತಕ್ಕ ಸಾಲ ನಿಧಾನವಾಗಬಹುದೆಂದು ಹೇಳಿದ್ದಾರೆ. ಆದನ್ನು ತರುವುದು ನಿಧಾನವಾದರೆ ಈ ಸ್ಕೀಮ್‌ನ್ನು ಜಾರಿಗೆ ಕೊಡುವುದಕ್ಕೆ ಖರ್ಚು ಜಾಸ್ತಿಯಾಗುತ್ತದೆಂದು ಹೇಳಿದ್ದಾರೆ. ಈ ಬಗ್ಗೆ ನಾವು ಎಲ್ಲಾ ರೀತಿಯ ಪ್ರಯತ್ನ ಮಾಡಿ ನೀರನ್ನು ಆದಷ್ಟು ಬೇಗ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸ ಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ಕಾರ್ಯ ಪ್ರಾರಂಭವಾಗಿದೆ.

ನಿಯಮ 334ರ ಮೇರೆಗೆ

1) ದಕ್ಷಿಣಕನ್ನಡ ಜಿಲ್ಲೆಯ 62 ತೊಕ್ಕುರು ಗ್ರಾಮಕ್ಕೆ ನಲ್ಲಿ ನೀರಿನ ಟ್ಯಾಂಕನ್ನು ನಿರ್ಮಿಸುವುದು.

† ಶ್ರೀ ಎನ್. ಎಂ. ಅಡ್ಯಂತಾಯ.—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ೬೨ ತೊಕ್ಕುರು ಗ್ರಾಮಕ್ಕೆ ಒಳಪಟ್ಟು ನಲ್ಲಿ ನೀರಿನ ಟ್ಯಾಂಕೊಂದು ಮಂಜೂರಾಗಿದ್ದು ಆ ಗ್ರಾಮದ ನಲ್ಲಿ ನೀರಿನ ಟ್ಯಾಂಕನ್ನು ೧೦ನೇ ತೊಕ್ಕುರು ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವುದು ಸರ್ಕಾರದ ಉದಾಸೀನತೆ